# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೧೩ ಆಗಸ್ಟ್, ೨೦೨೫ (ಶ್ರಾವಣ ೨೨, ಶಕವರ್ಷ ೧೯೪೭)<br>BENGALURU, WEDNESDAY, 13 AUGUST, 2025 (SHRAVANA 22, SHAKAVARSHA 1947) | ನಂ. ೪೮೨<br>No.482 |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–55)**

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ತಿದ್ದುಪಡಿ ಅಧಿನಿಯಮ, 1987 ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ನ್ನು(1963ರ ಕರ್ನಾಟಕ ಅಧಿನಿಯಮ 11), ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34), ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 2024(2025ರ ಕರ್ನಾಟಕ ಅಧಿನಿಯಮ 39)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 1963ರ ಕರ್ನಾಟಕ ಅಧಿನಿಯಮ 11ರ ತಿದ್ದುಪಡಿ.-** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ನ್ನು(1963ರ ಕರ್ನಾಟಕ ಅಧಿನಿಯಮ 11),-

(i) 2ನೇ ಪ್ರಕರಣದಲ್ಲಿ,-

(ಎ) (1)ನೇ ಉಪಪ್ರಕರಣದ, (1ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

**"(1-ಬಿಬಿ) "ಆಯುಕ್ತಾಲಯ"** ಎಂದರೆ 2ಎ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಆಯುಕ್ತರು ಮುಖ್ಯಸ್ಥರಾಗಿರುವ ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಆಯುಕ್ತಾಲಯ".

(ii) 2ನೇ ಪ್ರಕರಣದ ತರುವಾಯ, ಈ ಮುಂದಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:-

**"2ಎ. ಆಯುಕ್ತನ ನೇಮಕ.-** (1) ರಾಜ್ಯ ಸರ್ಕಾರವು, ಭಾರತೀಯ ನಾಗರಿಕ ಸೇವೆ (ಹಿರಿಯ ಶ್ರೇಣಿ) ದರ್ಜೆಯ ಅಧಿಕಾರಿಯನ್ನು ಆಯುಕ್ತರನ್ನಾಗಿ ನೇಮಕಮಾಡತಕ್ಕದ್ದು, ಆತನು ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು, ಯೋಜನಾ ಪ್ರಾಧಿಕಾರಗಳು, ಪೌರ ಯೋಜನಾ ಪ್ರಾಧಿಕಾರಗಳು ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ನಿರ್ದೇಶನಾಲಯ ಮತ್ತು ಈ ಅಧಿನಿಯಮದ 3ನೇ ಪ್ರಕರಣದ ಅಡಿಯಲ್ಲಿ ಗೊತ್ತುಪಡಿಸಿದ ಕಾರ್ಯಸಂಸ್ಥೆಯ ಮುಖ್ಯಸ್ಥನಾಗಿರತಕ್ಕದ್ದು.

(2) ಕಂದಾಯ, ಕಾನೂನು, ಇಂಜಿನಿಯರಿಂಗ್, ಮಾಹಿತಿ ತಂತ್ರಜ್ಞಾನ ವಿಷಯಗಳಿಗೆ ಸಂಬಂಧಿಸಿದೆ ಮತ್ತು ಸರ್ಕಾರಕ್ಕೆ ಅಗತ್ಯವಿರಬೇಕಾಗಿದೆ ಎಂದು ಪರಿಭಾವಿಸಿದ ಯಾವುದೇ ಇತರ ವಿಷಯಗಳಿಗೆ ಸಂಬಂಧಿಸಿದ ಅಂಥ ನೇಮಕಾತಿಗಾಗಿ ಸಂಬಳ ಮತ್ತು ಇತರ ಭತ್ಯೆಗಳನ್ನು ರಾಜ್ಯದ ಆದಾಯದಿಂದ ಪಾವತಿಸತಕ್ಕದ್ದು.

**2ಬಿ. ಆಯುಕ್ತನ ಅಧಿಕಾರ ಮತ್ತು ಕರ್ತವ್ಯಗಳು,.-** (1) ಆಯುಕ್ತನು ಆಯುಕ್ತಾಲಯದ ಮುಖ್ಯಸ್ಥನಾಗಿರತಕ್ಕದ್ದು.

(2) ಆಯುಕ್ತನು ಪ್ರಕರಣ 4-ಸಿ ಮತ್ತು 2ನೇ ಪ್ರಕರಣದ (7)ನೇ ಉಪಪ್ರಕರಣದ ಉಪಬಂಧಗಳಡಿ ಸ್ಥಾಪಿತವಾದ ಎಲ್ಲಾ ಯೋಜನೆ ಪ್ರಾಧಿಕಾರಗಳು ಮತ್ತು 3ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ನಿರ್ದೇಶನಾಲಯ ಮತ್ತು ಕಾರ್ಯಸಂಸ್ಥೆಯ ಮುಖ್ಯಸ್ಥನಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಸರ್ಕಾರ ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಯೋಜನೆಯ ನಿರ್ದೇಶಕರು, ಯೋಜನಾ ಪ್ರಾಧಿಕಾರಗಳು ಮತ್ತು ಪೌರ ಯೋಜನಾ ಪ್ರಾಧಿಕಾರಗಳ

ನಡುವೆ ವ್ಯವಹರಿಸುವ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಸಂವಹನವನ್ನು ಆಯುಕ್ತನ ಮೂಲಕ ನಡೆಸತಕ್ಕದ್ದು;

ಪರಂತು ಈ ಅಧಿನಿಯಮದ ಅಡಿಯಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದೊಳಗಿನ ಯೋಜನನಾ ಪ್ರಾಧಿಕಾರಗಳ ನಡುವೆ ವ್ಯವಹರಿಸುವ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಸಂವಹನವನ್ನು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆಯುಕ್ತನ ಮೂಲಕ ನಡೆಸತಕ್ಕದ್ದು.

(4) ಆಯುಕ್ತನು, ಈ ಅಧಿನಿಯಮದ ಅಡಿಯಲ್ಲಿ ಅಗತ್ಯವಿರುವಂಥ ವಿಷಯಗಳ ಕುರಿತು ಯೋಜನಾ ಪ್ರಾಧಿಕಾರಗಳು, ಪೌರ ಯೋಜನಾ ಪ್ರಾಧಿಕಾರಗಳು ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಯೋಜನೆಯ ನಿರ್ದೇಶನಾಲಯದ ಮೇಲ್ವಿಚಾರಣೆ ಮಾಡತಕ್ಕದ್ದು ಮತ್ತು ನಿರ್ದೇಶನ ನೀಡತಕ್ಕದ್ದು.

(5) ಆಯುಕ್ತನು ಈ ಅಧಿನಿಯಮದ ಅಡಿಯಲ್ಲಿ ಅಥವಾ ಸರ್ಕಾರದ ನಿರ್ದೇಶನದ ಮೇರೆಗೆ ಆತನಿಗೆ ಅಗತ್ಯವಾಗಿರಬಹುದಾದಂಥ ಇತರ ಪ್ರಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

**3. 1987ರ ಕರ್ನಾಟಕ ಅಧಿನಿಯಮ 34ರ ತಿದ್ದುಪಡಿ.-** ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34)ರ 78ನೇ ಪ್ರಕರಣದ ತರುವಾಯ, ಈ ಮುಂದಿನ 78-ಎ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

**"78-ಎ. ಆಯುಕ್ತನ ನೇಮಕಾತಿಯ ಮೇಲಿನ ಪರಿಣಾಮಗಳನ್ನು ಖಾತ್ರಿಪಡಿಸುವುದು.-** (1) ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಆಯುಕ್ತಾಲಯದ ಆಯುಕ್ತನು, ಅಧಿನಿಯಮದ 3ನೇ ಪ್ರಕರಣದಡಿ ಸ್ಥಾಪಿತವಾದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಮುಖ್ಯಸ್ಥನಾಗಿರತಕ್ಕದ್ದು.

(2)ಈ ಅಧಿನಿಯಮದ ಅಡಿಯಲ್ಲಿ ಸರ್ಕಾರ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳ ನಡುವೆ ವ್ಯವಹರಿಸುವ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಸಂವಹನವನ್ನು ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಆಯುಕ್ತಾಲಯದ ಆಯುಕ್ತನು ನಡೆಸತಕ್ಕದ್ದು.

(3) ಸರ್ಕಾರವು ಅಧಿಸೂಚನೆಯ ಮೂಲಕ, ನಿಯಮಗಳ ರಚನೆ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ಆಯುಕ್ತನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**4. 2025ರ ಕರ್ನಾಟಕ ಅಧಿನಿಯಮ ಸಂ.39ರ ತಿದ್ದುಪಡಿ.-** ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 39)ರ 76ನೇ ಪ್ರಕರಣದ

ತರುವಾಯ, ದಿನಾಂಕ: 23.05.2025ರಿಂದ ಜಾರಿಗೆ ಬರುವಂತೆ ಈ ಮುಂದಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

**“76-ಎ. ಆಯುಕ್ತನ ನೇಮಕಾತಿಯ ಮೇಲಿನ ಪರಿಣಾಮಗಳನ್ನು ಖಾತ್ರಿಪಡಿಸುವುದು.-** (1) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ ಪ್ರಕರಣ 2-ಎ ಅಡಿಯಲ್ಲಿ ನೇಮಕಗೊಂಡ ಆಯುಕ್ತಾಲಯದ ಆಯುಕ್ತನು ಪ್ರಕರಣ 3ರ ಅಡಿಯಲ್ಲಿ ರಚಿತವಾದ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಮುಖ್ಯಸ್ಥರಾಗಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಸರ್ಕಾರ ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ನಡುವೆ ವ್ಯವಹರಿಸುವ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಸಂವಹನವನ್ನು ಆಯುಕ್ತಾಲಯದ ಆಯುಕ್ತನು ನಡೆಸತಕ್ಕದ್ದು.

(3) ಸರ್ಕಾರವು ಅಧಿಸೂಚನೆಯ ಮೂಲಕ, ನಿಯಮಗಳ ರಚನೆ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು, ಆಯುಕ್ತನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಚಲಾಯಿಸಬಹುದೆಂದು ನಿರ್ದೇಶಿಸಬಹುದು.”

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 212 ನಯೋಸೆ 2023, ದಿನಾಂಕ:7.11.2023ರ ಮೂಲಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಚೇರಿಯನ್ನು ನಗರಾಭಿವೃದ್ಧಿ ಪ್ರಾಧಿಕಾರಗಳ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನೆಯ ಆಯುಕ್ತಾಲಯ ಎಂದು ಮರುನಾಮಕರಣ ಮಾಡಲಾಗಿದ್ದು, ಆಯುಕ್ತಾಲಯದ ಸ್ಥಾಪನೆ, ಆಯುಕ್ತರ ನೇಮಕ ಮತ್ತು ಆಯುಕ್ತರ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ದಿಷ್ಟಪಡಿಸುವುದಕ್ಕಾಗಿ ಉಪಬಂಧಗಳನ್ನು ರಚಿಸಲು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ನ್ನು(1963ರ ಕರ್ನಾಟಕ ಅಧಿನಿಯಮ 11), ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34), ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 2024(2025ರ ಕರ್ನಾಟಕ ಅಧಿನಿಯಮ 39)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಿ. ಎಸ್. ಸುರೇಶ**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987

## (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34) ಉದ್ಧೃತ ಭಾಗ

**XXX XXX XXX**

**78. ನಗರಾಭಿವೃದ್ಧಿ ಪ್ರಾಧಿಕಾರದ ರಚನೆಯಿಂದಾಗುವ ಪರಿಣಾಮಗಳು.-** (1) 3ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಅಧಿಸೂಚನೆಯನ್ನು ಹೊರಡಿಸಿ ಯಾವುದೇ ನಗರ ಪ್ರದೇಶಕ್ಕಾಗಿ ಒಂದು ನಗರಾಭಿವೃದ್ಧಿ ಪ್ರಾಧಿಕಾರದ ರಚನೆಯಾದ ಮೇಲೆ, ಸಂದರ್ಭಾನುಸಾರ, ಕರ್ನಾಟಕ ಸುಧಾರಣಾ ಮಂಡಲಿಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 11) ಅಥವಾ ಮೈಸೂರು ನಗರ ಸುಧಾರಣಾ ಅಧಿನಿಯಮ, 1903 (1903ರ ಮೈಸೂರು ಅಧಿನಿಯಮ III) ಅಂಥ ನಗರ ಪ್ರದೇಶದಲ್ಲಿ ಅನ್ವಯವಾಗುವುದು ನಿಂತು ಹೋಗತಕ್ಕದ್ದು.

(2) ಅಂಥ ಸಮಾಪ್ತಿಯಾದ ಮೇಲೆ, ಸದರಿ ಅಧಿನಿಯಮಗಳ ಅಡಿಯಲ್ಲಿ ಅಂಥ ನಗರ ಪ್ರದೇಶಗಳಿಗಾಗಿ ರಚಿತವಾದ ಸುಧಾರಣಾ ಮಂಡಲಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಅಥವಾ ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು ಇವುಗಳು ವಿಘಟಿತವಾಗತಕ್ಕದ್ದು.

1996ರ ಅಧಿನಿಯಮ ಸಂಖ್ಯೆ: 12ರಲ್ಲಿ ಜಾರಿಗೆ ಬಂದ ದಿನಾಂಕದಿಂದ ಇದನ್ನು ತೆಗೆದು ಹಾಕಲಾಗುವುದು.

(3) (2)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, (1)ನೇ ಉಪ ಪ್ರಕರಣದಲ್ಲಿರುವುದಾವುದೂ,-

(ಎ) ಸದರಿ ಅಧಿನಿಯಮಿತಿಗಳ ಹಿಂದಿನ ಕಾರ್ಯಚರಣೆ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ಕೃತ್ಯ ಅಥವಾ ಆ ಮೇರೆಗೆ ಎಡೆಗೊಡಲಾದ ಯಾವುದನ್ನೂ; ಅಥವಾ

(ಬಿ) ಸದರಿ ಅಧಿನಿಯಮಿತಿಯಲ್ಲಿ ಆರ್ಜಿಸಲಾದ, ಕೂಡಿಬಂದ ಅಥವಾ ಪ್ರಾಪ್ತವಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಅನ್ವಯ ಅಥವಾ ದಾಯಿತ್ವವನ್ನು; ಅಥವಾ

(ಸಿ) ಸದರಿ ಅಧಿನಿಯಮಿತಿಗಳ ವಿರುದ್ಧ ಮಾಡಲಾದ ಯಾವುದೇ ಅಪರಾಧಕ್ಕೆ ಸಂಬಂಧಪಟ್ಟಂತೆ ಪ್ರಾಪ್ತವಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ಜುಲ್ಮಾನೆಯನ್ನು ;

(ಡಿ) ಮೇಲೆ ಹೇಳಲಾದಂಥ ಹಕ್ಕು, ವಿಶೇಷಾಧಿಕಾರ, ಹೊಣೆಗಾರಿಕೆ, ದಾಯಿತ್ವ, ಮುಟ್ಟುಗೋಲು ಅಥವಾ ಜುಲ್ಮಾನೆಗೆ ಸಂಬಂಧಪಟ್ಟ ಯಾವುದೇ ತನಿಖೆ, ಕಾನೂನು ವ್ಯವಹರಣೆಗಳು ಅಥವಾ ಪರಿಹಾರವನ್ನು,

- ಬಾಧಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ತನಿಖೆ, ಕಾನೂನು ವ್ಯವಹರಣೆಗಳು ಅಥವಾ ಪರಿಹಾರವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ದಂಡ , ಮುಟ್ಟುಗೋಲು ಅಥವಾ ಜುಲ್ಮಾನೆಯನ್ನು, ಈ ಅಧಿನಿಯಮವನ್ನು ಜಾರಿಗೊಳಿಸಿಲ್ಲದಿದ್ದರೆ ಹೇಗೋ ಹಾಗೆ ವಿಧಿಸಬಹುದು.

(4) (ಎ) ಪೂರ್ವೋಕ್ತ ಉಪಬಂಧಗಳಿಗೊಳಪಟ್ಟು, ಸದರಿ ಅಧಿನಿಯಮದಲ್ಲಿ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮ (ಮಾಡಲಾದ ಯಾವುದೇ ನೇಮಕಾತಿ ಅಥವಾ ಪ್ರತ್ಯಾಯೋಜನೆ, ವಿಧಿಸಲಾದ ತೆರಿಗೆ ಅಥವಾ ಶುಲ್ಕ, ಹೊರಡಿಸಲಾದ ಅಧಿಸೂಚನೆ, ಆದೇಶ, ಲಿಖಿತ ಪತ್ರ ಅಥವಾ ನಿರ್ದೇಶನ ರಚಿಸಲಾದ ನಿಯಮ, ವಿನಿಯಮ, ಉಪಕಾನೂನು ಅಥವಾ ಸ್ಕೀಮು, ಪಡೆಯಲಾದ ಪ್ರಮಾಣ ಪತ್ರ, ಮಂಜೂರಾದ ಅನುಮತಿ ಅಥವಾ ಲೈಸನ್ಸ್ ಅಥವಾ ಜಾರಿಗೊಳಿಸಲಾದ ನೊಂದಣಿಯೂ ಸೇರಿದಂತೆ)ವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳಲ್ಲಿ ಮಾಡಲಾದುದೆಂದು ಅಥವಾ ಕೈಗೊಳ್ಳಲಾದುದೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವು ರದ್ದಾಗುವವರೆಗೆ ಮತ್ತು ರದ್ದಾದ ಹೊರತು ತದನುಸಾರವಾಗಿ ಜಾರಿಗೊಳಿಸಿದರೆ ಹೇಗೋ ಹಾಗೆ ಮುಂದುವರೆಯತಕ್ಕದ್ದು ;

(ಬಿ) ಸರ್ಕಾರವು ಆದೇಶಗಳ ಮೂಲಕ ನಿರ್ದಿಷ್ಟಪಡಿಸಲಾದಂಥ ವರ್ಗದ ನೌಕರರಲ್ಲದೆ, ಸುಧಾರಣಾ ಮಂಡಲಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು-ಇವುಗಳ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ನಗರಾಭಿವೃದ್ಧಿ ಸಂವಾದಿ ಪ್ರಾಧಿಕಾರದ ನೌಕರರಾಗತಕ್ಕದ್ದು ಮತ್ತು ಇತರ ಉಪಬಂಧಗಳನ್ನು ರಚಿಸುವವರೆಗೆ ಸಂಬಂಧಪಟ್ಟ ನಗರ ಪ್ರದೇಶಕ್ಕಾಗಿ ಪ್ರಾಧಿಕಾರದ ರಚನೆಗೆ ನಿಕಟಪೂರ್ವದಲ್ಲಿ ಅವರು ಹಕ್ಕುಳ್ಳವರಾಗಿದ್ದ ವೇತನ ಮತ್ತು ಭತ್ಯಗಳನ್ನು ಸ್ವೀಕರಿಸತಕ್ಕದ್ದು ಮತ್ತು ಸೇವಾ ಷರತ್ತುಗಳಿಗೊಳಪಡತಕ್ಕದ್ದು;

(ಸಿ) ಈ ಅಧಿನಿಯಮದ ಅಡಿಯಲ್ಲಿ ಮತ್ತು ಆ ದಿನಾಂಕದಂದು ಅಸ್ತಿತ್ವದಲ್ಲಿದ್ದ-

(i) ಸುಧಾರಣಾ ಮಂಡಲಿ ;

(ii) ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ

(iii) ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು;

- ಇವುಗಳ ಎಲ್ಲ ಆಸ್ತಿಗಳು ಮತ್ತು ದಾಯಿತ್ವಗಳು ಮತ್ತು ಇವುಗಳಿಂದ ಅಥವಾ ಇವುಗಳ ಪರವಾಗಿ ಮಾಡಿಕೊಳ್ಳಲಾದ ಎಲ್ಲಾ ಕರಾರುಗಳು, ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾವಣೆಯಾಗತಕ್ಕದ್ದು ;

(ಡಿ) ಸುಧಾರಣಾ ಮಂಡಲಿ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಅಥವಾ ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು-ಇವುಗಳ ನೌಕರರ ಸೌಲಭ್ಯಕ್ಕಾಗಿ ಭವಿಷ್ಯನಿಧಿ ಅಥವಾ ಸೇವಾ ನಿವೃತ್ತಿ ನಿಧಿ, ಅಥವಾ ಇತರ ಯಾವುದೇ ಅಂಥಹದೇ ನಿಧಿಯನ್ನು ಸ್ಥಾಪಿಸಿರುವಲ್ಲಿ , ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಂಥ ಯಾವುದೇ ನಿಧಿಯಲ್ಲಿ ಜಮೆಯಾಗಿದ್ದ ಹಣವು, ಅಂಥ ನಿಧಿಗೆ ಸೇರಿದ ಇತರ ಯಾವುವೇ ಆಸ್ತಿಗಳ ಜೊತೆಯಲ್ಲಿ ಸರ್ಕಾರಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು ಹಾಗೂ ಸರ್ಕಾರವು ಅಂಥ ನಿಧಿಗೆ ಸಂಬಂಧಪಟ್ಟಂತೆ ಸುಧಾರಣಾ ಮಂಡಲಿ,

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಅಥವಾ ನಗರ ಸುಧಾರಣಾ ನ್ಯಾಸ ಮಂಡಲಿ, ಮೈಸೂರು- ಇವುಗಳ ಹೊಣೆಗಳನ್ನು ನಿರ್ವಹಿಸಲು ಬದ್ಧವಾಗಿರತಕ್ಕದ್ದು;

1996ರ ಅಧಿನಿಯಮ ಸಂಖ್ಯೆ: 12ರಲ್ಲಿ ಜಾರಿಗೆ ಬಂದ ದಿನಾಂಕದಿಂದ ಇದನ್ನು ತೆಗೆದು ಹಾಕಲಾಗುವುದು.

(ಇ) ಯಾವುದೇ ಅಧಿನಿಯಮಿತಿಯಲ್ಲಿ ಮಾಡಲಾದ ಯಾವುದೇ ಉಲ್ಲೇಖ ಅಥವಾ ಯಾವುದೇ ನಿರಸಿತ ಅಧಿನಿಯಮಿತಿಯ ಯಾವುವೇ ಉಪಬಂಧಗಳಿಗೆ ಆದ ಲಿಖಿತಪತ್ರವನ್ನು ಒಂದು ವಿಭಿನ್ನ ಉದ್ದೇಶವು ಕಂಡುಬಂದ ಹೊರತು, ಈ ಅಧಿನಿಯಮದ ಸಂವಾದಿ ಉಪಬಂಧಗಳಿಗೆ ಆದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**XXX** **XXX** **XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**SEVENTH SESSION**

# THE KARNATAKA TOWN AND COUNTRY PLANNING AND CERTAIN OTHER LAWS (AMENDMENT) BILL, 2025

**(LA Bill No. 55 of 2025)**

A Bill further to amend the Karnataka Town and Country Planning Act, 1961, the Karnataka Urban Development Authorities Act, 1987 and the Mysuru Development Authority Act, 2024.

Whereas it is expedient further to amend the Karnataka Town and Country Planning Act, 1961 (Karnataka Act 11 of 1963), the Karnataka Urban Development Authorities Act, 1987 (Karnataka Act 34 of 1987) and the Mysuru Development Authority Act, 2024 (Karnataka Act 39 of 2025) for the purposes hereinafter appearing:

Be it enacted by the Karnataka State Legislature in the seventy sixth year of the Republic of India, as follows:

**1. Short title and commencement.-** (1) This Act may be called the Karnataka Town and Country Planning and certain other laws (Amendment) Act, 2025.

(2) It shall come into force at once.

**2. Amendment of Karnataka Act 11 of 1963.-** In the Karnataka Town and Country Planning Act. 1961(Karnataka Act 11 of 1963),-

(i) in section 2,

(a) in sub-section (1), after clause (1b), the following shall be inserted, namely:-

"(1bb) "Commissionerate" means the Urban Development Authorities and Town and Country Planning Commissionerate headed by a Commissioner, appointed under section 2A;"

(ii) after section 2, the following new section shall be inserted, namely:-

"**2A. Appointment of Commissioner.-** (1) An officer in the rank of Indian Administrative services (Senior Scale) shall be appointed by the State Government as Commissioner, who shall be the Head of the Commissionerate, for all the Urban Development Authorities and Mysuru Development Authority, Planning

Authorities, Municipal Planning Authorities and the Directorate of Town and Country Planning and the establishment appointed under section 3.

(2) The salary and other allowances payable for such appointment for matters related to revenue, law, engineering, information Technology and any other matter deemed to be required by the Government, shall be paid out of the revenue of the State.

**2B. Power and duties of Commissioner.-** (1) The Commissioner shall be the Head of the Commissionerate.

(2) The Commissioner shall be the Head of all the Planning Authorities constituted under the provisions of section 4-C and sub -section (7) of section 2 and the Directorate of Town and Country Planning and the establishment appointed under section 3.

(3) All correspondence relating to any matter between the Director of Town and Country Planning, Planning Authorities and Municipal Planning Authorities and the Government dealt under this Act, shall be conducted by the Commissioner:

Provided that all correspondence relating to any matter dealt under this Act between Planning Authorities within the Bengaluru Metropolitan Region shall be conducted by the Commissioner of Bengaluru Metropolitan Region Development Authority.

(4) The Commissioner shall supervise and direct the Planning Authorities, Municipal Planning Authorities and Directorate of Town and Country Planning on such matters as may be necessary under the Act.

(5) The Commissioner shall undertake such other functions as maybe required by him to do so under the Act or upon the direction of the Government."

**3. Amendment of Karnataka Act 34 of 1987.-** In the Karnataka Urban Development Authorities Act, 1987 (Karnataka Act 34 of 1987), after section 78, the following new section 78-A shall be inserted, namely:-

**"78-A. Consequences to ensue upon appointment of Commissioner.-**(1) The Commissioner of the Commissionerate appointed under section 2-A of the Karnataka Town and Country Planning Act, 1961, shall be the Head of all the Urban Development authorities constituted under section 3.

(2) All correspondence relating to any matter between the Urban Development Authorities and the Government dealt under this Act, shall be conducted by the Commissioner of the Commissionerate.

(3) The Government, by notification direct that any power exercisable by it under this Act, except the power to make rules, may be exercised by the Commissioner of the Commissionerate, as may be specified in the notification, subject to such restrictions and conditions as may be specified therein."

**4. Amendment of Karnataka Act No. 39 of 2025.-** In the Mysuru Development Authority Act, 2024 (Karnataka Act 39 of 2025), after section 76, the following new section shall be inserted with effect from 23.05.2025, namely:-

**"76-A. Consequences to ensue upon appointment of the Commissioner.-** (1) The Commissioner of the Commissionerate appointed under section 2-A of the Karnataka Town and Country Planning Act, 1961shall be the Head of Mysuru Development Authority constituted under section 3.

(2) All correspondence relating to any matter between the Mysuru Development Authority and the Government dealt under this Act, shall be conducted by the Commissioner of the Commissionerate.

(3) The Government may, by notification, direct that any power exercisable by it under the Act, except the power to make rules, may be exercised by the Commissioner of the Commissionerate, as may be specified in the notification, subject to such restrictions and conditions as may be specified therein."

## STATEMENT OF OBJECTS AND REASONS

It is considered necessary to further amend the Karnataka Town and Country Planning Act, 1961 (Karnataka Act 11 of 1963), the Karnataka Urban Development Authorities Act, 1987 (Karnataka Act 34 of 1987) and the Mysuru Development Authorities Act, 2024 (Karnataka Act 39 of 2025) to make provisions for the establishment of the Commissionerate, appointment of Commissioner and to specify the powers and duties of the Commissioner, as the office of the Director of Town and Country Planning has been renamed as the Commissionerate of Urban Development Authorities and Town and Country Planning vide Government Order No: UDD: 212 NAYOSE 2023 Dated: 7.11.2023.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**B. S. SURESHA**
Minister for Urban Development
and Urban Planning

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE KARNATAKA URBAN DEVELOPMENT AUTHORITIES ACT, 1987 (KARNATAKA ACT 34 OF 1987)

**X XX XXX XX X**

**78. Consequence of constitution of Urban Development Authority.-** (1) On the issue of a notification under sub-section (1) of section 3 constituting an Urban Development Authority for any Urban Area the Karnataka Improvements Boards Act, 1976 (Karnataka Act 11 of 1976) or the City of Mysore Improvement Act, 1903 (Mysore Act III of 1903), as the case may be, shall cease to be applicable in such Urban Area.

(2) On such cessor, the Improvement Board the Bagalkot Town Development Authority or the City Improvement Trust Board, Mysore constituted under the said Acts for such Urban Areas shall stand dissolved.

(3) Subject to the provisions of sub-section (2), nothing in sub-section (1) shall affect,-

(a) the previous operation of the said enactments or anything done, or suffered thereunder ; or

(b) any right, privilege, application or liability, acquired, accrued or incurred in the said enactment ; or

(c) any penalty, forfeiture or punishment incurred in respect of any offence committed against the said enactments; or

(d) any investigation, local proceeding or remedy in respect of such right, privilege, obligation, liability, forfeiture or punishment as aforesaid ; and any such investigations, legal proceeding or remedy may be instituted, continued, or enforced, and any such penalty, forfeiture or punishment may be imposed as if this Act had not been enacted.

(4) (a) Subject to the preceding provision, anything done or any action taken (including any appointment, or delegation made, tax or fee imposed, notification, order, instrument, or direction issued, rule, regulation, bye-law or scheme framed, certificate obtained, permit or licence granted or registration effected, in the said Acts shall be deemed to have been done or taken in the corresponding provisions

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



of this Act and shall continue if enforced accordingly unless and until superseded by anything done or any action taken under this Act ;

(b) Every officer and servant of an Improvement Board, the Bagalkot Town Development Authority and the City Improvement Trust Board, Mysore as the case may be, other than such class of servants as the Government may by order specify, shall become employees of the corresponding Urban Development Authority and shall, until other provisions are made, receive the salary and allowances and be subject to the conditions of service to which they were entitled immediately before the constitution of the Authority for the Urban Areas concerned;

(c) All assets and liabilities of and all contracts made by or on behalf of,-

(i) the Improvement Board;

(ii) the Bagalkot Town Development Authority

(iii) the City Improvement Trust Board, immediately before the date of constitution of an Authority for the Urban Area under this Act and subsisting on that date shall stand transferred to the concerned Urban Development Authority;

(d) Where a provident fund or superannuation fund or any other like fund has been established for the benefit of the employees of the Improvement Board the Bagalkot Town Development Authority or the City Improvement Trust Board, Mysore, the moneys standing to the credit of any such fund on the date of commencement of this Act together with any other assets belonging to such fund shall stand transferred to and vest in the Government and the Government shall be liable to discharge the obligations of the Improvement Board, the Bagalkot Town Development Authority or the City Improvement Trust Board, Mysore, in respect of such fund;

(e) Any reference in any enactment made or any instrument to any provisions of any of the repealed enactment shall, unless a different intention appears, be construed as a reference to the corresponding provisions of this Act.

**X XX XXX XX X**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH